18-12-2024

(57)

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ಬಿ.ಜಿ.ಪಾಟೀಲರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಹೇಳಿಕೆ

*****

**ವಿಷಯ:- ಕಲಬುರಗಿ ಜಿಲ್ಲೆಯ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ಆಗ್ರಹಿಸಿ ಜೇವರ್ಗಿ ತಾಲೂಕಿನ ಚಿಗರಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾವಿರಾರು ರೈತರು ಎತ್ತಿನ ಬಂಡಿಯೊಂದಿಗೆ ಬೃಹತ್ ಪ್ರತಿಭಟನೆ ನಡೆಸಿತ್ತಿದ್ದು. ನಾಲ್ಕು ದಶಕದ ಹೋರಾಟದ ಫಲದಿಂದ ಮಲ್ಲಾಬಾದ್ ಏತ ನೀರಾವರಿ ಯೋಜನೆ ಆರಂಭಿಸಿದ್ದು, ನಂತರ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಜೇವರ್ಗಿ-ಯಡ್ರಾಮಿ ರೈತರು ಹೋರಾಟ ನಡೆಸಿದ್ದರಿಂದ ಹಿಂದಿನ ಸರ್ಕಾರ 330.40 ಕೋಟಿ ರೂ.ಗಳ ಕಾಮಗಾರಿಗೆ ಅನುಮೋದನೆ ನೀಡಿ. ಟೆಂಡರ್ ಪ್ರಕ್ರಿಯೆ ಆರಂಭಿಸಿತ್ತು. ಆದರೆ ವಿಧಾನ ಸಭೆ ಚುನಾವಣೆ ಘೋಷಣೆಯಾಗಿದ್ದರಿಂದ ಪ್ರಕ್ರಿಯೆ ಸ್ಥಗಿತಗೊಂಡಿದೆಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ವಿಧಾನ ಸಭೆ ಚುನಾವಣೆ ಪ್ರಚಾರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ 24 ಗಂಟೆಯಲ್ಲಿಯೇ ಟೆಂಡರ್ ಕರೆಯುವುದಾಗಿ ಹೇಳಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದುಎರಡು ವರ್ಷಗಳಾಗುತ್ತಿದ್ದರೂ ಯಾವುದೇ ಕೆಲಸ ಆರಂಭವಾಗಿಲ್ಲ. ಆದ್ದರಿಂದ ಸದರಿ ಕಾಮಗಾರಿ ಟೆಂಡರ್ ಕರೆದು ಕೂಡಲೇ ಕಾಮಗಾರಿಯನ್ನು ಪ್ರಾಂಭಿಸಲು ರೈತರ ಪರವಾಗಿ ನಾನು ಸದನದ ಶೂನ್ಯ ವೇಳೆಯಲ್ಲಿ ಚರ್ಚಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.**

****

ಕೃಷ್ಣಾ ಮೇಲ್ದಂಡೆಯೋಜನೆ ಹಂತ-3ರ ರೂ.51,148.94 ಕೋಟಿ (2014-15ರ ದರಪಟ್ಟಿ) ಪರಿಷ್ಕೃತ ವಿವರವಾದ ಯೋಜನಾ ವರದಿಗೆ ದಿನಾಂಕ:09.10.2017ರ ಆದೇಶದನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಮಲ್ಲಾಬಾದ್ ಏತ ನೀರಾವರಿ ಯೋಜನೆಗೆ ರೂ.578.27 ಕೋಟಿ ಪ್ರಾವಿದಾನ ಮಾಡಲಾಗಿದ್ದು, ಇಲ್ಲಿಯವರೆಗೆ (ನವೆಂಬರ್-2024ರ ಅಂತ್ಯಕ್ಕೆ) ರೂ.299.27 ಕೋಟಿ ಮೊತ್ತ ವೆಚ್ಚ ಮಾಡಲಾಗಿರುತ್ತದೆ. ಕೃ.ಮೇ.ಯೋ. ಹಂತ-3ರಡಿಯ 9 ಉಪ-ಯೋಜನೆಗಳ ಪೈಕಿ ಮಲ್ಲಾಬಾದ್ ಏತ ನೀರಾವರಿ ಯೋಜನೆ ಒಂದು ಪ್ರಮುಖ ಏತ ನೀರಾವರಿ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಒಟ್ಟಾರೆ 33,860 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ.

ಈ ಯೋಜನೆಯಡಿಯ ಜೇವರ್ಗಿ ಶಾಖಾ ಕಾಲುವೆ, ಮುಡಬಾಳ ಶಾಖಾ ಕಾಲುವೆ ಮತ್ತು ಶಹಾಪುರ ಶಾಖಾ ಕಾಲುವೆಗಳಿಂದ ಆಫ್ ಟೇಕ್ ಹೊಂದಿರುವ 3 ಲಿಫ್ಟ್‌ಗಳು ಒಳಗೊಂಡಿರುತ್ತದೆ. ವಿತರಣಾ ಕಾಲುವೆ/ ಲ್ಯಾಟರಲ್‌ಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ.

ಸದರಿ ಮಲ್ಲಾಬಾದ ಏತ ನೀರಾವರಿ ಯೋಜನೆಯ ಲಿಫ್ಟ್ – 1, 2 & 3ರ ಮುಖ್ಯ ಕಾಲುವೆ ಕಾಮಗಾರಿ ಪೂರ್ಣಗೊಳಿಸಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಮುಂದುವರೆದು, ಯೋಜನೆಯಡಿ ಕೈಗೊಂಡಿರುವ ಕೆಲ ವಿತರಣಾ ಕಾಲುವೆ ಮತ್ತು ಲ್ಯಾಟರಲ್ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ.

ಮಲ್ಲಾಬಾದ ಏತ ನೀರಾವರಿ ಯೋಜನೆಯಡಿ ಲಿಫ್ಟ್ – 1, 2 & 3ರಡಿಯ ಜೇವರ್ಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ನೀರಾವರಿಗೆ ಸೌಲಭ್ಯಕ್ಕೆ ಒಳಪಡುವ ಸುಮಾರು 27,585 ಹೆಕ್ಟೇರ್ ಪೈಕಿ ಸುಮಾರು 5,264 ಹೆಕ್ಟೇರ್ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತವೆ ಹಾಗೂ ಶಹಾಪುರ ತಾಲ್ಲೂಕಿನ

ವ್ಯಾಪ್ತಿಯಲ್ಲಿ ನೀರಾವರಿಗೆ ಸೌಲಭ್ಯಕ್ಕೆ ಒಳಪಡುವ ಸುಮಾರು 6275 ಹೆಕ್ಟೇರ್ ಪೈಕಿ ಸುಮಾರು 1,880 ಹೆಕ್ಟೇರ್ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತವೆ

ಪ್ರಸ್ತುತ ಮಲ್ಲಾಬಾದ ಏತ ನೀರಾವರಿ ಯೋಜನೆಯಡಿ ಲಿಫ್ಟ್ – 1, 2 & 3ರಡಿಯ ರೂ. 359.67 ಕೋಟಿ ಮೊತ್ತದಲ್ಲಿ 3 ಪ್ಯಾಕೇಜ್‌ಗಳಡಿ ಕೆಲ ವಿತರಣಾ ಕಾಲುವೆಯ ಬಾಕಿ ಲ್ಯಾಟರಲ್ ಕಾಮಗಾರಿಗಳು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

ಮಲ್ಲಾಬಾದ್ ಏತ ನೀರಾವರಿ ಯೋಜನೆ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಲ್ಲಿ ಬರುವ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದು ಕೇಂದ್ರ ಸರ್ಕಾರದಿಂದ ಹೊರಡಿಸುವ ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ತೀರ್ಪಿನ ಅಧಿಸೂಚನೆಗೆ ಒಳಪಟ್ಟಿರುತ್ತದೆ. ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರದ ಜೊತೆಗೆ ಸಮನ್ವಯ ಸಾಧಿಸಲಾಗುತ್ತಿದೆ.

ಆದಾಗ್ಯೂ, ಗೆಜೆಟ್ ಅಧಿಸೂಚನೆಗೆ ಸಮಾನಾಂತರವಾಗಿ ಮಲ್ಲಾಬಾದ ಏತ ನೀರಾವರಿ ಯೋಜನೆಯಡಿ ಜೇವರ್ಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ರೂ.359.67 ಕೋಟಿ ಮೊತ್ತದ ಬಾಕಿ ಇರುವ 3 ಪ್ಯಾಕೇಜ್‌ಗಳಡಿ ಲ್ಯಾಟರಲ್ ಕಾಮಗಾರಿಗಳನ್ನು ಕೆ.ಬಿ.ಜೆ.ಎನ್.ಎಲ್ ನಿಗಮ ನಿರ್ದೇಶಕರ ಮಂಡಳಿ ಅನುಮೋದನೆ ಪಡೆದು ಅನುದಾನ ಲಭ್ಯತೆ ಅನುಸಾರ ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುವುದು.

ಜಸಂಇ 121 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ